# ಕಥೋಪದೇಶ

"ನಾಲ್ಕು ವಿಧದ ಮನುಜರಾರು?" ಎಂದು ರಾಜನು ಬುದ್ಧನನ್ನು ಕೇಳಿದ. ಬುದ್ಧನು ಉತ್ತರಿಸಿದ :


"ಒಬ್ಬ ಕತ್ತಲಿನಿಂದ ಕತ್ತಲೆಯ ಕಡೆ ನಡೆಯುವವನು; ಮತ್ತೊಬ್ಬ ಕತ್ತಲಿನಿಂದ ಬೆಳಕಿನೆಡೆಗೆ ನಡೆಯುವವನು; ಇನ್ನೊಬ್ಬ ಬೆಳಕಿನಿಂದ ಕತ್ತಲೆಯ ಕಡೆ ನಡೆಯುವವನು; ನಾಲ್ಕನೆಯವನು ಬೆಳಕಿನಿಂದ ಬೆಳಕಿನ ಕಡೆ ನಡೆಯುವವನು."

ಚಂಡಾಲನಾಗಿ ಹುಟ್ಟಿ ಚಂಡಾಲನಾಗಿಯೇ ಜೀವಿಸಿದರೆ, ಉತ್ತಮ ವ್ಯಕ್ತಿಯಾಗಲು ಪ್ರಯತ್ನಿಸದಿದ್ದರೆ, ಅವನು ಮೊದಲನೆಯವನು.

ಹೀನ ಕುಲದಲ್ಲಿ ಜನಿಸಿ, ಬಡತನದಲ್ಲಿದ್ದರೂ ಸತ್ಕರ್ಮದಲ್ಲಿ ತೊಡಗಿರುವವನು ಎರಡನೆಯವನು.

ಉತ್ತಮ ಕುಲದಲ್ಲಿ ಜನಿಸಿ, ರೂಪ ಬಲ ಸಿರಿವಂತನಾಗಿದ್ದೂ ದುರಾಚಾರಿಯಾಗಿದ್ದರೆ ಅವನು ಮೂರನೆಯವನು.

ನಾಲ್ಕನೆಯವನು ಉತ್ತಮ ಕುಲದಲ್ಲಿ ಜನಿಸಿ, ಅನುಕೂಲ ಸ್ಥಿತಿಯಲ್ಲಿದ್ದು, ಸದಾಚಾರ ಸಾಧನೆಗಳಲ್ಲಿ ತೊಡಗಿರುವವನು.




ಕಲೆ : ಪುರುಷೋತ್ತಮ ಕಾರಂತ